ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಅಧೀಕ್ಷಕರುಗಳಿಗೆ ಗೆಜೆಟೆಡ್ ಮ್ಯಾನೇಜರ್ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್‌ಆರ್‌ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ :25.07.2019ರ ಸಂಖ್ಯೆ : ಕಾಶಿಇ/27/ಅಧೀಕ್ಷಕರು/ಜೇಪ/ಬಸ್ಥಾವಿ/2019-20ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ರಾಜ್ಯವ್ಯಾಪಿ ಉಳಿಕೆ ಮೂಲವೃಂದ ಹಾಗೂ ದಿನಾಂಕ :25.07.2019ರ ಸಂಖ್ಯೆ : ಕಾಶಿಇ/38/ಬೋನೌ/ಹೈಕ/ಜೇಪ/ಬಸ್ಥಾವಿ/2019-20ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಅಧೀಕ್ಷಕರುಗಳ ಅಂತಿಮ ಜ್ಯೇಷ್ಠತಾ ಪಟ್ಟಿ.
3. ದಿನಾಂಕ: 23.09.2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು .

*****

**ಪ್ರಸ್ತಾವನೆ:**

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಗೆಜೆಟೆಡ್ ಮ್ಯಾನೇಜರ್ ಹುದ್ದೆಗಳಿಗೆ ಅಧೀಕ್ಷಕರ ಹುದ್ದೆಯಿಂದ ಶೇಕಡ 100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಪತ್ರದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ ಅಧೀಕ್ಷಕರುಗಳ ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಅಧೀಕ್ಷಕರುಗಳ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಗೆಜೆಟೆಡ್ ಮ್ಯಾನೇಜರ್ ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ದಿನಾಂಕ: 23.09.2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ ಗೆಜೆಟೆಡ್ ಮ್ಯಾನೇಜರ್ ಹುದ್ದೆಗಳನ್ನು ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಅರ್ಹ ಅಧೀಕ್ಷಕರುಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಅಧೀಕ್ಷಕರುಗಳ ವೃಂದದಿಂದ ಗೆಜೆಟೆಡ್ ಮ್ಯಾನೇಜರ್ ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ಅಧೀಕ್ಷಕರುಗಳಿಗೆ ಗೆಜೆಟೆಡ್ ಮ್ಯಾನೇಜರ್ ರಾಗಿ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಾಶಿಇ/25/ಮ್ಯಾ.ಬಡ್ತಿ/2020-21/ಬಸ್ಥಾವಿ, ಬೆಂಗಳೂರು, ದಿನಾಂಕ: 6 .11.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅಧೀಕ್ಷಕರುಗಳಿಗೆ ವೇತನ ಶ್ರೇಣಿ *ರೂ.40900-1100-46400-1250-53900-1450-62600-1650-72500-1900-78200*

ರಲ್ಲಿ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಗೆಜೆಟೆಡ್ ಮ್ಯಾನೇಜರ್ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಇರುವ ಖಾಲಿ ಹುದ್ದೆಗೆ ಎದುರಾಗಿ ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ರಾಜ್ಯವ್ಯಾಪಿ ಉಳಿಕೆ ಮೂಲ ವೃಂದ (ಆರ್.ಕೆ.)

| ಕ್ರ.ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಭಾರತಿ ಕೆ.ಎಸ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ, ದಾವಣಗೆರೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು | ಖಾಲಿ ಹುದ್ದೆಗೆ ಎದುರಾಗಿ |
| 2 | ಮೋಹನ್ ರಾಜ್.ಕೆ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು | ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು,ಭದ್ರಾವತಿ | ಖಾಲಿ ಹುದ್ದೆಗೆ ಎದುರಾಗಿ |
| 3 | ನರೇಂದ್ರ ಬಾಬು ಎಸ್.ಆರ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಣನೂರು | ಖಾಲಿ ಹುದ್ದೆಗೆ ಎದುರಾಗಿ |
| 4 | ರುಷಿಕೇಶ ಡಿ.ಖೂಮಕರ್ | ಸರ್ಕಾರಿ ಕಲಾ ವಿಜ್ಞಾನ ಕಾಲೇಜು, ಕಾರವಾರ | ಸರ್ಕಾರಿ ಮಹಿಳಾ ಕಾಲೇಜು,ಯಡಹಳ್ಳಿ,ಮುದೋಳ | ಖಾಲಿ ಹುದ್ದೆಗೆ ಎದುರಾಗಿ |
| 5 | ಜ್ಯೋತಿ ಎಂ.ಆರ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವದುರ್ಗ | ಖಾಲಿ ಹುದ್ದೆಗೆ ಎದುರಾಗಿ |
| 6 | ಜಗದೀಶ ಎನ್ | ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಿವಮೊಗ್ಗ. | ಪ್ರಾದೇಶಿಕ ಕಛೇರಿ, ಮಂಗಳೂರು | ಖಾಲಿ ಹುದ್ದೆಗೆ ಎದುರಾಗಿ |
| 7 | ಇಂದಿರಾ.ಕೆ | ಕೇಂದ್ರಕಛೇರಿ, ಬೆಂಗಳೂರು. | ಸರ್ಕಾರಿ ಮಹಿಳಾ ಕಾಲೇಜು,ಮಂಡ್ಯ | ಖಾಲಿ ಹುದ್ದೆಗೆ ಎದುರಾಗಿ |
| 8 | ನಟೇಶ್‌ಕೆ.ಎನ್ | ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬಾಗೇಪಲ್ಲಿ (ನಿಯೋಜನೆ ಸಪ್ರದಕಾ ಚಿಕ್ಕಬಳ್ಳಾಪುರ) | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ | ಖಾಲಿ ಹುದ್ದೆಗೆ ಎದುರಾಗಿ |

(ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ - ಕೆ.ಕೆ.)

| ಕ್ರ.ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಫಕೀರಪ್ಪ ಹೆಚ್. ಬೇವಿನಗಿಡದ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು (ಯಲ್ಬುರ್ಗಾ ॥ತಾ॥) | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಜೇವರ್ಗಿ | ಖಾಲಿ ಹುದ್ದೆಗೆ ಎದುರಾಗಿ |

1. ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಈ ಆದೇಶವನ್ನು ವೆಬ್‌ಸೈಟ್‌ನಿಂದ ಪಡೆದು ಬಡ್ತಿ ಹೊಂದಿದವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.
2. ಬಡ್ತಿ ಹೊಂದಿದವರು ಸ್ಥಳನಿಯುಕ್ತಿಗೊಳಿಸಲಾದ ಕಛೇರಿ/ಕಾಲೇಜುಗಳಲ್ಲಿ ಈ ಆದೇಶ ಪ್ರಕಟಗೊಂಡ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯನ್ನು ರದ್ದುಪಡಿಸಲಾಗುವುದು.
3. ಬಡ್ತಿಗೊಂಡ ನೌಕರರು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.
4. ಬಡ್ತಿ ಹೊಂದಿರುವ ಅಧೀಕ್ಷಕರುಗಳ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ/ ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ -ಮಾಹಿತಿ ಹಾಗೂ ಮುಂದಿನ ಅಗತ್ಯಕ್ರಮಕ್ಕಾಗಿ.
2) ಮೇಲ್ಕಂಡ ಅಧೀಕ್ಷಕರುಗಳಿಗೆ (ಸಂಬಂಧಪಟ್ಟ ಮೇಲಾಧಿಕಾರಿ/ಪ್ರಾಂಶುಪಾಲರು ಮೂಲಕ)
3) ಮ್ಯಾನೇಜರ್/ಅಧೀಕ್ಷಕರು, ಸೇವಾ ವಿಭಾಗ/ವರ್ಗಾವಣೆ & ನಿಯೋಜನೆ ವಿಭಾಗ ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು/ಎಲ್ಲಾ ವಿಭಾಗಗಳ ಅಧೀಕ್ಷಕರುಗಳು – ಮಾಹಿತಿಗಾಗಿ.